# ಬರಲಿದೆ ಭಾರತದ ಎಐ

**‘ಇಂಡಿಯಾ ಎಐ’ ಮಿಷನ್‌ನಡಿ ಸ್ವಂತ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಅಭಿವೃದ್ಧಿಗೆ ಕೇಂದ್ರ ಸರ್ಕಾರವು ಮುಂದಾಗಿದ್ದು, ಕೆಲ ತಿಂಗಳಲ್ಲೇ ಎಐ ಕ್ಷೇತ್ರಕ್ಕೆ ಭಾರತವೂ ಕಾಲಿಡಲಿದೆ.**

**■ ಶಶಿಕುಮಾರ್ ಸಿ.**

ಕೃತಕ ಬುದ್ಧಿಮತ್ತೆಯು (ಎಐ) ತಂತ್ರಜ್ಞಾನ ಕ್ಷೇತ್ರದ ಭವಿಷ್ಯ ಎಂದೇ ಹೇಳಲಾಗುತ್ತಿದ್ದು, ಈ ಕ್ಷೇತ್ರದಲ್ಲಿ ಅಮೆರಿಕ, ಚೀನಾ ದೇಶಗಳು ಈಗಾಗಲೇ ಬಹುದೂರ ಸಾಗಿವೆ. ಎಐ ಕ್ಷೇತ್ರಕ್ಕೆ ಕಾಲಿಡಲು ಭಾರತವೂ ಉತ್ಸುಕವಾಗಿದ್ದು, ಈಚೆಗೆ ‘ಭಾರತದ ಎಐ’ ಮಿಷನ್ ಪೋರ್ಟಲ್ ಅನ್ನು ಕೇಂದ್ರ ಸರ್ಕಾರವು ಬಿಡುಗಡೆ ಮಾಡಿದೆ.

ಈ ಮಿಷನ್‌ನಡಿ ಭಾರತವು ತನ್ನ ಸ್ವಂತ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಭಿವೃದ್ಧಿಗೆ ಮುಂದಾಗಲಿದ್ದು, ಇದಕ್ಕಾಗಿ ಕೇಂದ್ರ ಸರ್ಕಾರವೂ ₹10,372 ಕೋಟಿ ವಿನಿಯೋಗಿಸಲಿದೆ. ಈಗಾಗಲೇ ಎಐ ಕ್ಷೇತ್ರದಲ್ಲಿ ಭಾರಿ ಸದ್ದು ಮಾಡುತ್ತಿರುವ ಅಮೆರಿಕದ ಚಾಟ್‌ಜಿಪಿಟಿ, ಜೆಮಿನಿ ಹಾಗೂ ಚೀನಾದ ಡೀಪ್‌ಸೀಕ್‌ನಂಥ ಜನರೇಟಿವ್ ಎಐ ಮಾಡೆಲ್‌ಗಳಿಗೆ ಸಡ್ಡು ಹೊಡೆಯುವಂತಹ ದೇಶೀಯ ಎಐ ಮಾಡೆಲ್ ರೂಪಿಸಲು ಈ ಹಣ ಬಳಸಿಕೊಳ್ಳಲಿದೆ. ಇದೆಲ್ಲವೂ ಅಂದುಕೊಂಡಂತೆ ಸಾಧ್ಯವಾದಲ್ಲಿ, ಮುಂದಿನ 8–10 ತಿಂಗಳಲ್ಲಿ ಭಾರತವು ತನ್ನದೇ ಆದ ಜನರೇಟಿವ್ ಎಐ ಮಾಡೆಲ್ ಹೊಂದಲಿದೆ.

### ಸಂಸ್ಕೃತಿಗೆ ಅನುಗುಣವಾದ ಎಐ

ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಭಿವೃದ್ಧಿಯು ನಮ್ಮ ಗುರಿ. ಇದಕ್ಕೆ ಅತ್ಯಗತ್ಯವಾದ ಜಿಪಿಯುಗಳ (ಗ್ರಾಫಿಕ್ ಪ್ರೊಸೆಸಿಂಗ್ ಯುನಿಟ್) ಸಂಗ್ರಹವನ್ನು ಭಾರತ ಹೊಂದಿದೆ. ಇಂಡಿಯಾ ಎಐ ಮಿಷನ್‌ನಡಿ ರೂಪುಗೊಳ್ಳಲಿರುವ ಎಐ ಭಾರತದ ಅಗತ್ಯಗಳಿಗೆ ಹಾಗೂ ಸಂಸ್ಕೃತಿಗೆ ಅನುಗುಣವಾದ ಎಐ ಮಾಡೆಲ್ ಆಗಲಿರುವುದು ವಿಶೇಷ.




ಭಾರತದ ಎಐ ರೂಪಿಸಲು ಜಿಯೊ ಪ್ಲಾಟ್‌ಫಾರ್ಮ್ಸ್, ಸಿಎಂಎಸ್ ಕಂಪ್ಯೂಟರ್ಸ್, ಟಾಟಾ ಕಮ್ಯುನಿಕೇಷನ್ಸ್, ಇ2ಇ ನೆಟ್‌ವರ್ಕ್ಸ್, ಯೊಟ್ಟಾ ಡೇಟಾ ಸರ್ವಿಸಸ್ ಸೇರಿದಂತೆ ಹಲವು ಕಂಪನಿಗಳು ಕೈಜೋಡಿಸಲು ಮುಂದೆ ಬಂದಿವೆ ಎಂದು ಈಚೆಗೆ ಕೇಂದ್ರದ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಅಗ್ಗದ ದರದಲ್ಲಿ ಪ್ರತಿಯೊಬ್ಬರಿಗೂ ಅತ್ಯಾಧುನಿಕ ತಂತ್ರಜ್ಞಾನವು ಲಭ್ಯವಾಗಬೇಕು ಎಂಬುದು ಕೇಂದ್ರ ಸರ್ಕಾರದ ನಿಲುವು. ಇದರ ಭಾಗವಾಗಿ, ಭಾರತದಲ್ಲಿ ಎಐ ತಂತ್ರಜ್ಞಾನ ಅಭಿವೃದ್ಧಿಗೆ 10000 ಜಿಪಿಯು ಪಡೆಯುವ ಗುರಿ ಹೊಂದಲಾಗಿತ್ತು. ಆದರೆ ಈಗ ಇದಕ್ಕೂ ಅಧಿಕ ಅಂದರೆ 18,693 ಜಿಪಿಯುಗಳನ್ನು ಭಾರತ ಹೊಂದಿದೆ. ಇವುಗಳನ್ನು ಬಳಸಿಕೊಂಡು ಚಾಟ್‌ಜಿಪಿಟಿ, ಡೀಪ್‌ಸೀಕ್‌ನಂತಹ ಪ್ರಭಾವಶಾಲಿ ಎಐ ಮಾಡೆಲ್‌ಗಳನ್ನು ಅಭಿವೃದ್ಧಿ ಮಾಡಬಹುದು ಎಂದಿದ್ದಾರೆ ಅವರು. ■

## ಧ್ವನಿ ಆಧರಿತ ಪಾವತಿ; ಗೂಗಲ್ ಚಿತ್ತ

**ಗೂಗಲ್**, ತನ್ನ ಗೂಗಲ್ ಪೇ ಬಳಕೆದಾರರಿಗಾಗಿ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದೊಂದಿಗೆ ಕಾರ್ಯನಿರ್ವಹಿಸಲಿರುವ ಧ್ವನಿ ಆಧರಿತ ಪಾವತಿ ಸೇವೆಗಳನ್ನು ಅಭಿವೃದ್ಧಿಪಡಿಸುತ್ತಿದ್ದು, ಶೀಘ್ರವೇ ಅದು ಕಾರ್ಯರೂಪಕ್ಕೆ ಬರಲಿದೆ.

ಈ ಫೀಚರ್‌ನಿಂದ ಬಳಕೆದಾರರು ಧ್ವನಿ ಆದೇಶಗಳನ್ನು ಬಳಸಿಕೊಂಡು ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್ (UPI) ವಹಿವಾಟು ನಡೆಸಬಹುದು. ಓದಲು ಮತ್ತು ಬರೆಯಲು ಬಾರದ ಜನರಿಗೆ ಇದು ಅನುಕೂಲಕಾರಿಯಾಗಿದ್ದು, ಅವರು ಧ್ವನಿ ಆದೇಶಗಳ ಮೂಲಕ ಸರಳವಾಗಿ ಆನ್‌ಲೈನ್ ಪಾವತಿ ಮಾಡಬಹುದು.

ಹೊಸ ಫೀಚರ್‌ಗಾಗಿ ಗೂಗಲ್ ಈಗಾಗಲೇ ಕೇಂದ್ರ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಭಾಷಿಣಿ ಎಐ ಯೋಜನೆಯೊಂದಿಗೆ ಇದು ಕಾರ್ಯರೂಪಕ್ಕೆ ಬರಲಿದೆ. ಭಾರತದ ಹಲವಾರು ಭಾಷೆಗಳಲ್ಲಿ ಈ ಸೇವೆ ಲಭ್ಯವಾಗಲಿದ್ದು, ಬಳಕೆದಾರರು ಅವರ ಭಾಷೆಯಲ್ಲೇ ಗೂಗಲ್ ಪೇಗೆ ಕಮಾಂಡ್ ನೀಡಿ ಪಾವತಿ ವಹಿವಾಟು ನಡೆಸಬಹುದು.

ಈಚೆಗೆ ಈ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಗೂಗಲ್ ಪೇ ಅಧಿಕಾರಿ ಶರತ್ ಬುಲುಸು, ‘ಆ್ಯಪ್ ಬಳಸುತ್ತಿರುವ ಕೋಟ್ಯಂತರ ಬಳಕೆದಾರರಿಗೆ ಕೃತಕ ಬುದ್ಧಿಮತ್ತೆ ಧ್ವನಿ ಆಧರಿತ ಪಾವತಿ ಸೇವೆಯು ನೆರವಾಗಲಿದ್ದು, ಇದರಿಂದ ಪಾವತಿ ವಿಧಾನವು ಇನ್ನಷ್ಟು ಸರಳವಾಗಲಿದೆ’ ಎಂದಿದ್ದಾರೆ.

ನವೆಂಬರ್ 2024ರಲ್ಲಿ ಬಿಡುಗಡೆಯಾದ ವರದಿಯೊಂದರ ಪ್ರಕಾರ, ಭಾರತದಲ್ಲಿ ನಡೆದ ಒಟ್ಟು ಯುಪಿಐ ವಹಿವಾಟಿನ ಪೈಕಿ ಗೂಗಲ್ ಪೇ ಪಾಲು ಶೇಕಡ 37ರಷ್ಟಿದೆ. ಫೋನ್ ಪೇ ಪಾಲು ಶೇಕಡ 47.8ರಷ್ಟಿದೆ. ಎಐ ಧ್ವನಿ ಆಧರಿತ ಪಾವತಿ ಸೇವೆಯಿಂದ ಈ ಪ್ರಮಾಣ ಹೆಚ್ಚಿಸಿಕೊಳ್ಳುವ ಗುರಿಯಲ್ಲಿದೆ ಗೂಗಲ್ ಪೇ. ■